

ಹರಿದಾಡುತ್ತಿರುವ ಬಣ್ಣ ಬಣ್ಣದ ಲೆಕ್ಕವಿಲ್ಲದಷ್ಟು ದೊಡ್ಡ ಮೀನುಗಳು, ಕೊಳದೊಳಗಿನ ದುಂಡು ಆಕಾರದ ಕಲ್ಲು ಹಾಸುಗಳು, ಚಿಮ್ಮುಕ್ಕುವ ಸಣ್ಣ ಪುಟ್ಟ ಕಾರಂಜಿಗಳು, ಹುಲ್ಲಿನ ಮಧ್ಯೆ ನೀರು ಹಾಯಿಸುತ್ತಿರುವ ಪ್ರತಿಮೆಗಳು ಅತ್ಯಂತ ಮನಮೋಹಕ. 1963ರಲ್ಲಿ ಅಗುಂಗ್ ಅಗ್ನಿ ಪರ್ವತ ಸ್ಫೋಟಗೊಂಡಾಗ ತೀರ್ಥಗಂಗಾ ಸಂಪೂರ್ಣ ನಾಶವಾಗಿತ್ತಂತೆ. ಈಗಿರುವ ತೀರ್ಥಗಂಗಾ ಮತ್ತೆ ಕಟ್ಟಿ ಉಳಿಸಿರುವುದು ಎನ್ನುತ್ತಾರೆ.

ಮತ್ತೆ ಮಳೆ! ಊಟದ ನಂತರ 'ಮದರ್ ಆಫ್ ಟೆಂಪಲ್' ಪುರ ಬೈಸಾಕ್ಕೆ ಮತ್ತು ಉಲು ದಾನು ಬೆರಾಟನ್ ದೇವಸ್ಥಾನಗಳಿಗೆ ಹೋಗುವುದಿತ್ತು. ಆರು ಗಂಟೆಗೆ ದೇವಸ್ಥಾನಗಳು ಮುಚ್ಚುವುದರಿಂದ, ಎರಡು ದೊಡ್ಡ ದೇವಸ್ಥಾನಗಳನ್ನು ನೋಡಲಾಗುವುದಿಲ್ಲವೆಂಬುದು ಅರಿಯ ತರ್ಕ. ವಿಲ್ಲಾದ ಹಾದಿಯಲ್ಲಿ ಪುರ ಗಾವಾ ಲಾವಾಹ್ ಮಂದಿರ ಸಿಗುತ್ತೆ, ನೋಡಬಹುದೆಂದ. ನಮ್ಮ ಪಟ್ಟಿಯಲ್ಲಿಲ್ಲದ ದೇಗುಲ ಮತ್ತು ದೇವರು!

## ಪುರ ಗಾವಾ ಲಾವಾಹ್

ಜಿನುಗುತ್ತಿದ್ದ ಮಳೆಯಲ್ಲಿಯೇ ಒಂದು ತಾಸು ಪ್ರಯಾಣಿಸಿದ ನಂತರ ಹಿಂದೂ ಮಹಾಸಾಗರದೆದುರು ಜನಸಂದಣಿಯಿಲ್ಲದೇ ತಣ್ಣಗಿದ್ದ ದೇಗುಲವದು. ಪ್ರಾಂಗಣದಲ್ಲಿದ್ದ ಗಡ್ಡಧಾರಿಯೊಬ್ಬರನ್ನು, 'ಯಾವ ದೇವರು?' ಕೇಳಿದಾಗ, 'ಶಿವ ಪರಮಾತ್ಮ!' ಎಂದರು. ಸಮೀಪಿಸಿ ನೋಡಿದರೆ ಯಾವ ದೇವರೂ ಇಲ್ಲ! ಹಣಿಕಿದರೆ ಗವ್‌ಯೆನ್ನುವ ಕಪ್ಪು ಗುಹೆ! ಗುಹೆಯಲ್ಲಿ ಎಲ್ಲೆಂದರಲ್ಲಿ ಚಾಚಿಕೊಂಡಿದ್ದ ಬೃಹದಾಕಾರದ ಮರದ ಬೇರುಗಳು, ಹಾರಾಡುತ್ತಿರುವ ಅಸಂಖ್ಯ ಬಾವಲಿಗಳು, ಸಂಜೆಯ ಹೊತ್ತಿನ ಅವುಗಳ ಚೀತ್ಕಾರ! ಮೈ ಜುಮ್ಮೆಂದಿತು! ಎಲ್ಲಿ ಬಂದು ನಿಂತಿದ್ದೇವೆ! ಅರಿಯನ್ನು, 'ಏನು ದೇವಸ್ಥಾನವಿದು?' ಕೇಳಿದರೆ, **'Bat Cave!'** ಎಂದ. 'ಗಾವಾ' ಅಂದರೆ ಗುಹೆಯೆಂದೂ, 'ಲಾವಾಹ್' ಅಂದರೆ ಬಾವಲಿಯೆಂದೂ ವಿವರಿಸಿದ.

11ನೇ ಶತಮಾನದಲ್ಲಿ ಹಿಂದೂಧರ್ಮವನ್ನು ಪ್ರಚಾರಪಡಿಸಿ, ಪ್ರಬಲಗೊಳಿಸಿದ ಗುರು ಮ್ಪೋ ಕುಟರನ್ ಸ್ಥಾಪಿಸಿದ ದೇಗುಲವಿದು. ಆದರೆ 9ನೇ ಶತಮಾನದಲ್ಲಿ ಬಾಲಿಯ ಅನೇಕ ದೇವಸ್ಥಾನಗಳನ್ನು ಸ್ಥಾಪಿಸಿದ ಹಿಂದೂ ಧರ್ಮಗುರು ದ್ಯಾಂಗ್ ಹ್ಯಾಂಗ್ ನಿರರ್ಥನೇ ಈ ಮಂದಿರವನ್ನೂ ಕಟ್ಟಿದ ಎನ್ನುತ್ತಾರೆ. ಹಿಂದೂ ಪ್ರಚೋದಕರು ಬಾವಲಿಯ ವಾಸಸ್ಥಾನವಾಗಿದ್ದ ಈ ಗುಹೆಯನ್ನು ಧ್ಯಾನಕ್ಕಾಗಿ ಬಳಸುತ್ತಿದ್ದವರು, ಆನಂತರ ದೇಗುಲವಾಗಿ ಪರಿವರ್ತಿಸಿದರೆನ್ನುವುದು ಕತೆ. ಪುರ ಗಾವಾ ಲಾವಾಹ್ ಕೂಡಾ ಪ್ರಮುಖ ದೇವಸ್ಥಾನಗಳಲ್ಲೊಂದು. ಸಮುದ್ರಾಭಿಮುಖವಾಗಿರುವ ಮತ್ತುಳಿದ ದೇಗುಲಗಳಿಗಿರುವಂತಹದ್ದೇ ಹಿನ್ನೆಲೆ ಇಲ್ಲಿದೆ. ಅಚಲ ಗುಹೆಯಲ್ಲಿ ಸುಭದ್ರನಾಗಿರುವ ದೇವ ಸಮುದ್ರಮುಖೇನ ದ್ವೀಪದೊಳಗೆ ಪ್ರವೇಶಿಸುವ ದುಷ್ಟ ಶಕ್ತಿಗಳನ್ನು ತಡೆದು ರಕ್ಷಿಸಬಲ್ಲ ರಕ್ಷಕನೆಂಬ ನಂಬಿಕೆ.

ಬಾಲಿನೀಸರ ಹಿಂದೂ ಸಂಸ್ಕೃತಿಯಲ್ಲಿ ಬೌದ್ಧ ಧರ್ಮದ ದಟ್ಟ ಛಾಯೆ ಮುಸುಕಿರುವುದನ್ನು ಕಾಣಬಹುದು. ಉಡುಗೆ ತೊಡುಗೆ, ಆಚಾರ ವಿಚಾರ, ಸಂಪ್ರದಾಯಗಳಲ್ಲಿ ಬೌದ್ಧ ಧರ್ಮದ ಪ್ರಭಾವವಿದೆ. 8ನೇ ಶತಮಾನದಲ್ಲಿ ಹಿಂದೂ ಧರ್ಮ ಮತ್ತು ಬೌದ್ಧ ಧರ್ಮ ಒಟ್ಟಿಗೇ ಭಾರತದಿಂದ ಇಂಡೋನೇಷ್ಯಾಯಾಕ್ಕೆ ಬಂತೆನ್ನುವುದು ಪ್ರತೀತಿ. ಬದುಕಿನ ಮೂಲ ತತ್ವ ಅಡಗಿರುವುದು ಪ್ರಕೃತಿ, ದೇವರು ಮತ್ತು ಮನುಷ್ಯರ ನಡುವಿನ ಸಮತೋಲನದಿಂದೆಂಬುದು ಅವರ ಅಚಲ ನಂಬಿಕೆ. ಅವರ ಹಬ್ಬ ಹುಣ್ಣಿಮೆಗಳಲ್ಲಿ ಹಿಂದೂ ಸಂಪ್ರದಾಯದಂತೆ ಶಿವರಾತ್ರಿ ಆಚರಣೆ ಬಿಟ್ಟರೆ ಮತ್ತೆಲ್ಲವೂ ಭಿನ್ನ. ಮಾರ್ಚ್ ತಿಂಗಳಲ್ಲಿ ಆಚರಿಸುವ 'ನೈಪಿ' ಪರಮ ಶ್ರೇಷ್ಠ ಹಬ್ಬ. ಅವತ್ತಿಡೀ ಬಾಲಿ ಮೌನ ಆಚರಣೆಯಲ್ಲಿ ಮುಳುಗಿರುತ್ತೆ. ಕುಟುಂಬದ ಸದಸ್ಯರೆಲ್ಲರೂ ಉಪವಾಸವಿದ್ದು, ಸಂಪೂರ್ಣ ಪ್ರಾರ್ಥನೆಯಲ್ಲಿ ಮುಳುಗಿ ಧ್ಯಾನಿಸುವುದರ ಮೂಲಕ ತಮ್ಮನ್ನು ತಾವೇ ಶುದ್ಧೀಕರಿಸಿಕೊಳ್ಳುವ ದಿನ. ರಸ್ತೆಯಲ್ಲಿ ಓಡಿಯಾಡುವಂತಿಲ್ಲ, ಒಲೆ ಹಚ್ಚಿ ಅಡುಗೆ ಮಾಡುವಂತಿಲ್ಲ. ಟಿ.ವಿ, ಮೊಬೈಲ್ ಬಳಸುವಂತಿಲ್ಲ. ಆ ಸಮಯದಲ್ಲಿ ಪ್ರವಾಸಿಗರು ಬಾಲಿಯಲ್ಲಿದ್ದರೆ, ಸಾರ್ವಜನಿಕ ವಾಹನ ಸಂಪರ್ಕವಿಲ್ಲದೇ, ರೂಮಿನಲ್ಲೇ ಕಳೆಯಬೇಕಾಗುತ್ತದೆಯಂತೆ.

## ಪುರ ತನಹ್ ಲಾಟ್ ದೇವಸ್ಥಾನ

ಡೆನ್‌ಪಸಾರ್‌ಯಿಂದ ಇಪ್ಪತ್ತು ಕಿಲೋಮೀಟರ್ ದೂರದಲ್ಲಿರುವ ತನಹ್ ಲಾಟ್ ಸುಂದರ ಸ್ಥಳ. ತನಹ್ ಲಾಟ್ ಅಂದರೆ **'Land in the sea'** ಎಂಬರ್ಥ. ಕಡಲಾಚೆಗಿನ ದೊಡ್ಡ ಬಂಡೆಯಲ್ಲಿ ಈ ಪುರಾತನ ದೇವಸ್ಥಾನವಿದೆ. ಬಾಲಿಯ ಅನೇಕ ದೇಗುಲ ಕಟ್ಟಿದ ಹಿಂದೂ ಧರ್ಮ ಪ್ರಚಾರದ ದ್ಯಾಂಗ್ ಹ್ಯಾಂಗ್ ನಿರರ್ಥ, ಧರ್ಮ ಪ್ರಚಾರದ ಸಮಯದಲ್ಲಿ ಇಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮರಳಾಗಿ, ಸಮುದ್ರ ದೇವರನ್ನು ಪೂಜಿಸಲು ಸೂಕ್ತ ಸ್ಥಳವಿದೆಂದು ಸ್ಥಳೀಯರ ಸಹಾಯದಿಂದ ಕಡಿದಾದ ಬೆಟ್ಟದ ಮೇಲೆ ಈ ದೇವಸ್ಥಾನ ಕಟ್ಟಿದನೆಂಬುದು ಕತೆ.

ದ್ವೀಪದ ಸುರಕ್ಷೆಗಾಗಿ ಸಮುದ್ರದಂಡೆ ಮೇಲೆ ಕಟ್ಟಿರುವ ಏಳು ದೇಗುಲದಲ್ಲಿ ತನಹ್ ಲಾಟೂ ಒಂದು. ಆದಿ ದೇವತ್ರಯರು, ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಶಿವ ಈ ದೇಗುಲದಲ್ಲಿರುವ ಪರಮ ಶಕ್ತಿ. ಉತ್ತರಕ್ಕೆ ಬ್ರಹ್ಮನೂ, ಮಧ್ಯದಲ್ಲಿ ವಿಷ್ಣುವೂ, ದಕ್ಷಿಣದಲ್ಲಿ ಪರಮೇಶ್ವರನೂ ನೆಲೆ ನಿಂತಿದ್ದಾರೆಂಬ ನಂಬಿಕೆ. ಹಿಂದೂ ಸಂಸ್ಕೃತಿಯಾದರೂ ಅದೆಷ್ಟು ಭಿನ್ನ. ಬಾಲಿನೀಸ್ ಸಂಸ್ಕೃತಿಯಲ್ಲಿ ದೈವತ್ವ ಹಾಗೂ ದ್ರೌಷ್ಟ್ಯ ಪ್ರಕೃತಿಯಲ್ಲಿನ ಸಹಜ ಗುಣ. ಒಂದಿಲ್ಲದೇ ಮತ್ತೊಂದಿಲ್ಲ. ಅವರ ಪೂಜಾ ವಿಧಾನಗಳಲ್ಲಿ ಎರಡಕ್ಕೂ ಸಮಾನ ವಿಧಿಗಳಿವೆ. ದುಷ್ಟ ಶಕ್ತಿ ಓಡಿಸಿ, ದೈವತ್ವವನ್ನು ಕಾಪಾಡುವಂತೆ ಪ್ರಾರ್ಥಿಸುವುದಕ್ಕಿಂತ ಎರಡೂ ಶಕ್ತಿಗಳೂ ಒಗ್ಗೂಡಿಕೊಂಡು ಸಾಮರಸ್ಯದಿಂದಿರುವಂತೆ ಪೂಜೆಗೈಯಲಾಗುತ್ತದೆ. ತನಾಹ್ ಲಾಟ್‌ನಲ್ಲಿ ವಿಷಪೂರಿತ ಹಾವುಗಳಿವೆ. ದುಷ್ಟ ಶಕ್ತಿಯೆದುರು ಹೋರಾಡಿ ಕಾಪಾಡುತ್ತದೆಯೆಂದು ಬಲವಾಗಿ ನಂಬುವ ಬಾಲಿನೀಸರು ಹಾವನ್ನು ಪೂಜ್ಯ ಭಾವದಿಂದ ಕಾಣುತ್ತಾರೆ.

ತನಹ್ ಲಾಟ್, ಬಾಲಿಯ ಅತ್ಯಂತ ರೊಮ್ಯಾಂಟಿಕ್ ಐಲ್ಯಾಂಡ್. ನೀಲಾಗಸದಡಿ ವಿಸ್ತಾರವಾಗಿ ಹಬ್ಬಿಕೊಂಡಿರುವ ಬೆಳ್ನೊರೆ ಸಾಗರ, ಅಲೆಯ ನಿರಂತರ ಮೊರೆತದೊಡನೆ, ಸೂರ್ಯಕಿರಣಕ್ಕೆ ಮಿಂಚುವ ಕಡಲ ಶುಭ್ರ ತರಂಗ